# ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಓ ಎಸ್ ನಂ.101-2012** **ಡಿ . ಡಬ್ಲ್ಯುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಹುಚ್ಚಯ್ಯ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 09-06-2022. |

**ಪಾಟೀ ಸವಾಲುಃ  ಶ್ರೀ  ಕೆ.ಎಸ್.ಕೆ.  ವಕೀಲರಿಂದಃ**

ವಾದಿಯವರು ಸಲ್ಲಿಸಿರುವ ದಾವ ವಿಚಾರವನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ. ನನ್ನ ತಾತನವರ ಹೆಸರು ಚಿಕ್ಕಕೆಂಪೇಗೌಡ, ನನ್ನ ಅಜ್ಜಿಯವರ ಹೆಸರು ವೀರಮ್ಮ. ದಾವ ಸ್ವತ್ತುಗಳು ಎಲ್ಲವೂ ಚಿಕ್ಕಕೆಂಪೇಗೌಡರವರ ಸ್ವತ್ತುಗಳು ಎಂದರೆ ಸರಿ. ನನ್ನ ತಂದೆಯವರ ಜೀವಿತ ಕಾಲದಲ್ಲಿ ಸ್ವತ್ತುಗಳನ್ನು ಖರೀದಿ ಮಾಡಿದ್ದು, ಅದರ ಸರ್ವೆ ನಂಬರ್ 340/1 ಆಗಿರುತ್ತದೆ. ಸದರಿ ಖರೀದಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವ ಐಟಮ್ 8 ರ ಸ್ವತ್ತನ್ನು ಹೊರತುಪಡಿಸಿ ಉಳಿದೆಲ್ಲಾ ಸ್ವತ್ತುಗಳು ನನ್ನ ತಾತನವರಿಗೆ ಸೇರಿದ ಸ್ವತ್ತುಗಳು ಆಗಿರುತ್ತದೆ. ನಮ್ಮ ಕುಟುಂಬವು ವ್ಯವಸಾಯಗಾರರ ಕುಟುಂಬ ಎಂದರೆ ಸರಿ. ನನ್ನ ತಂದೆಯವರು ವ್ಯವಸಾಯದಿಂದ ಸಂಪಾದನೆ ಮಾಡಿದ ಹಣದಿಂದ ದಾವ ಐಟಮ್ ನಂಬರ್ 8 ರ ಸ್ವತ್ತನ್ನು ಖರೀದಿ ಮಾಡಿರುತ್ತಾರೆಂದರೆ ಸರಿ. ನಾನು, 3 ನೇ ಪ್ರತಿವಾದಿಯ ಪತಿ, 4 ಮತ್ತು 5 ನೇ ಪ್ರತಿವಾದಿಗಳು ಸೇರಿ 6 ನೇ ಪ್ರತಿವಾದಿಯವರಿಗೆ ಬರೆದುಕೊಟ್ಟಿರುವ ಕ್ರಯ ಪತ್ರದಲ್ಲಿ ದಾವ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದು ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ಪಹಣಿ ಪತ್ರಿಕೆಯಲ್ಲಿಯೂ ಸಹ ಐ.ಹೆಚ್.ಆರ್. ಆಧಾರದ ಮೇಲೆ ಖಾತೆ ಆಗಿರುತ್ತದೆ ಎಂದು ನಮೂದು ಆಗಿರುತ್ತದೆಂದರೆ

ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯವರು 1986 ರಲ್ಲಿ ಮಾಡಿಕೊಟ್ಟ ವಿಭಾಗ ಪತ್ರದ ಆಧಾರದ ಮೇಲೆ ನಮ್ಮಗಳ ಹೆಸರಿಗೆ ಖಾತೆ ಆಗಿರುತ್ತದೆಂದು ನುಡಿಯುತ್ತಾರೆ

2. ನಾನು ಹೇಳುವಂತೆ ವಿಭಾಗ ಪತ್ರದ ಆಧಾರದ ಮೇಲೆ ನಮ್ಮಗಳ ಹೆಸರಿಗೆ ಖಾತೆಗಳ ಬದಲಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಮಾಡಿಕೊಟ್ಟಿದ್ದಾರೆಂದು ಹೇಳುವ ವಿಭಾಗ ಪತ್ರವನ್ನು ನಾನು ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ ದಾವ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಾದಿ ಹುಟ್ಟಿದಂದಿನಿಂದಲ್ಲೇ ಹಕ್ಕುದಾರರು ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂದಿಸಿದಂತೆ ಯಾವುದೇ ಪತ್ರವನ್ನು ಮಾಡಿಕೊಡುವ ವೈಯಕ್ತಿಕ ಹಕ್ಕು ನನ್ನ ತಂದೆಯವರಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಹಕ್ಕನ್ನು ಕಸಿದುಕೊಳ್ಳುವ ಉದ್ದೇಶದಿಂದ ನನ್ನ ತಂದೆಯವರ ಮರಣ ನಂತರ ನಾವುಗಳು ದಾವ ಸ್ವತ್ತುಗಳ ಪೌತಿ ಖಾತೆಯನ್ನು ನಮ್ಮ ಹೆಸರಿಗೆ ಬದಲಾವಣೆ ಮಾಡಿಕೊಂಡು 6 ನೇ ಪ್ರತಿವಾದಿಗೆ ಕ್ರಯ ಪತ್ರವನ್ನು ನೊಂದಾಣಿ ಮಾಡಿಕೊಟ್ಟಿರುತ್ತೇವೆಂದರೆ ಸರಿಯಲ್ಲ. ನಿಡಿ-1 ರಿಂದ 4 ಕ್ಕೆ ವಾದಿ ಮತ್ತು 2 ನೇ ಪ್ರತಿವಾದಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ಸಹೋದರರು ಒಂದೇ ಮನೆಯಲ್ಲಿ ವಾಸವಾಗಿರುತ್ತೇವೆಂದರೆ ಸರಿಯಲ್ಲ. ನಾವುಗಳು ಪ್ರತ್ಯೇಕವಾಗಿ 4 ಮನೆಯಲ್ಲಿ ವಾಸವಾಗಿರುತ್ತೇವೆಂದು ನುಡಿಯುತ್ತಾರೆ.

3. ವಾದಿಯವರು ನನ್ನ ತಂದೆ-ತಾಯಿಯವರು ಜೀವಂತವಿರುವ ವರೆಗೆ ಊರಿಗೆ ಬಂದು ನನ್ನ ತಂದೆ-ತಾಯಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಾನು ಮತ್ತು ನನ್ನ ತಂದೆ-ತಾಯಿ ಸಹೋದರರು ಮತ್ತು ಸೋದರ ಹಾಗೂ ಸೋದರಿಯವರು ಒಟ್ಟು ಕುಟುಂಬದ ಸದಸ್ಯರಾಗಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು 1986 ರ ವರೆಗೆ ಮಾತ್ರ ಒಟ್ಟು ಕುಟುಂಬದ ಸದಸ್ಯರಾಗಿದ್ದೇವೆಂದು ನುಡಿಯುತ್ತಾರೆ. ನಾನು ಹೇಳುವಂತೆ 1986 ರ ವರೆಗೆ ಮಾತ್ರ ಒಟ್ಟು ಕುಟುಂಬದ ಸದಸ್ಯರಾಗಿರಲಿಲ್ಲ ದಾವ ಸಲ್ಲಿಸುವ ವರೆವಿಗೂ ಒಟ್ಟು ಕುಟುಂಬದ ಸದಸ್ಯರಾಗಿದ್ದೇವು ಎಂದರೆ ಸರಿಯಲ್ಲ. ದಾವ ಸಲ್ಲಿಸುವ ಪೂರ್ವದಲ್ಲಿ ವಾದಿ ನನ್ನನ್ನು ಮತ್ತು ನನ್ನ ಇತರ ಪ್ರತಿವಾದಿಗಳಾದ ಸಹೋದರ ಹಾಗೂ ಸಹೋದರಿಯರನ್ನು ವಿಭಾಗ ಮಾಡಿಕೊಡುವಂತೆ ಕೇಳಿಕೊಂಡಿರುತ್ತಾರೆಂದರೆ ಸರಿಯಲ್ಲ. ನಾವುಗಳು ವಾದಿಗೆ ವಿಭಾಗ ಮಾಡಿಕೊಡಲು

ನಿರಾಕರಿಸಿದ್ದರಿಂದ ವಾದಿಯವರು ದಾಖಲೆಗಳನ್ನು ಪರಿಶೀಲಿಸಿದ ನಂತರ ನಮ್ಮಗಳ ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ವಾದಿಯನ್ನು ನಾವು ಮೈಸೂರಿಗೆ ವಿವಾಹ ಮಾಡಿಕೊಟ್ಟಿರುತ್ತೇವೆಂದರೆ ಸರಿ. ನಾನು ಮತ್ತು ಪ್ರತಿವಾದಿ 2 ರಿಂದ 5 ರವರು ಕೆಂಪಿಸಿದ್ದನಹುಂಡಿಯಲ್ಲಿ ವಾಸವಾಗಿರುತ್ತೇವೆಂದರೆ ಸರಿ.

4 ವಾದಿಯವರು ವಿವಾಹವು 1980 ರಲ್ಲಿ ಜರುಗಿರುತ್ತದೆ. ಆಗ ವಾದಿಗೆ ಎಷ್ಟು ವರ್ಷ ಆಗಿತ್ತು ಎಂದು ನನಗೆ ಗೊತ್ತಿಲ್ಲ. ದಾವ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಆಗಿರುವುದರಿಂದ ವಾದಿಗೂ ಸಹ ಸದರಿ ಸ್ವತ್ತುಗಳಲ್ಲಿ ವಾದಿಗೂ ಸಹ 1/6 ಭಾಗಾಂಶದ ಹಕ್ಕು ಇರುತ್ತದೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**